ಅಡ್ವಾನ್ಸ್ ಕೊಡಬಹುದೆಂದು. ಅದಕ್ಕೆ ಬೇಕಾದರೆ ಬೇರೆ ವ್ಯವಸ್ಥೆ ಮಾಡಬಹುದು, ಅದಕ್ಕೆ ಅವಕಾಶ ಇದೆ. ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ನಿನವರು ಎಲ್ಲಾ ಮಾರ್ಕೆಟ್ ಯಾರ್ಡ್‌ಗಳಲ್ಲಿ ಗೋಡೌನ್ ಕಟ್ಟುವುದಕ್ಕೆ ಹಣ ಕೊಟ್ಟಿದ್ದಾರೆ. ಅವರಿಗೆ ಬೇಕಾದರೆ ಜಿಲ್ಲಾ ಬ್ಯಾಂಕುಗಳಲ್ಲಿ ಹಣ ಕೊಡಿಸಬಹುದು. ಸುಮಾರು ಸಿ.ಎ.ಎಲ್.ಡಿ.ಗಳು ಡೇ-ಟು-ಡೇ ವ್ಯವಹಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಹಣ ಸಾಲುವುದಿಲ್ಲ. ಅಂಥ ಸಂಸ್ಥೆಗಳಿಗೆ ಹಣ ಸಹಾಯ ಮಾಡ ಬೇಕಾಗುತ್ತದೆ. ಆದ್ದರಿಂದ ತಾವು ಹೇಳಿದ ಬ್ಯಾಂಕನ್ನು ಮಾಡುವುದಕ್ಕಾಗುವುದಿಲ್ಲ. ಅದು ಸಾಧುವೂ ಅಲ್ಲ, ಸಾಧ್ಯವೂ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಗಳು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ವಿಷಯದಲ್ಲಿ ಹೇಳಿದರು. ಒಂದು ಮಾತು ನಿಜ, ರೈತಾಪಿಗೆ ಜನರಿಗೆ ಆಗಬೇಕಾದ ಕೆಲಸಗಳು ಅಲ್ಲಿ ಸರಿಯಾಗಿ ಆಗುವುದಿಲ್ಲ. ಅದಕ್ಕೆ ವಿಶೇಷವಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯವಸಾಯ ಇಲಾಖೆಯಲ್ಲಿ ಹಣ ಕಡಿಮೆ ಇದೆ. ಎಲ್ಲೆಲ್ಲಿ ಸಾಧ್ಯತೆ ಇದೆ ಅಂಥ ಕಡೆ ನೀವು ರೀಸರ್ಚ್ ಮಾಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಮಾರ್ಕೆಟಿಂಗ್ ಬೋರ್ಡ್ ಎಂದು ಏನಿದೆ ಅಲ್ಲಿ ರೀಸರ್ಚ್ ವ್ಯವಸ್ಥೆ ಮಾಡುತ್ತಿದ್ದೇವೆ, ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೂಡ ರೀಸರ್ಚ್ ಗೋಸ್ಕರ ವ್ಯವಸ್ಥೆ ಮಾಡಿದ ಹಾಗೆ ಜ್ಞಾಪಕ. ಅದನ್ನು ತಿಳಿದು ಹೇಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯದವರು ಇಂಥ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಮಾರ್ಕೆಟಿಂಗ್ ಬೋರ್ಡ್‌ನಿಂದ ಹಣ ಒದಗಿಸ ಬಹುದು. ಈ ಸಂದರ್ಭದಲ್ಲಿ, ಈ ವರ್ಷ ರಾಷ್ಟ್ರ ಮಟ್ಟದಲ್ಲಿ ಮಾರ್ಕೆಟಿಂಗ್ ವ್ಯವಸ್ಥೆಗೋಸ್ಕರ ನಮ್ಮ ರಾಜ್ಯಕ್ಕೆ ಎರಡನೆಯ ಬಹುಮಾನ ದೊರೆತಿದೆ ಎಂದು ಹೇಳಲು ಸಂತೋಷ ಪಡುತ್ತೇನೆ.

ಹೊಸದುರ್ಗ ತಾಲ್ಲೂಕಿನಲ್ಲಿನ ದೇವಪುರ ಅಮೃತ್‌ಮಹಲ್ ನಗಾರಿ ಕಾವಲಿನಲ್ಲಿ ಸಾಗುವಳಿಯ ಬಗ್ಗೆ.

೧೦೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ದೇವಪುರ ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಸಾಗುವಳಿಗೆ ವಿಲೇ ಮಾಡಲು ಬಿಡುಗಡೆ ಮಾಡಿದ ಜಮೀನನ್ನು ಹಂಚಲಾಗಿದೆಯೇ,

ಆ) ಹಾಗಿದ್ದಲ್ಲಿ ಕಳೆದ ೧೦ ವರ್ಷಗಳಿಂದಲೂ ಈ ಪ್ರದೇಶದ ಬನಸಿಹಳ್ಳಿಯ ಬಡ ಭೂ ರಹಿತ ಹರಿಜನರು ಬಿಡುಗಡೆಯಾದ ೩೦ ಎಕರೆ ಜಾಗವನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗರ್ ಹುಕುಂ ಸಾಗುವಳಿದಾರರಿಗೆ ಜಮೀನು ಖಾಯಂ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ದೇವಪುರ ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಬಿಡುಗಡೆಯಾದ ಜಮೀನನ್ನು ಸಾಗುವಳಿಗೆ ಹಂಚಲಾಗಿದೆ.

ಆ) ಬನಸಿಹಳ್ಳಿಯ ಬಡ ಭೂ ರಹಿತ ಹರಿಜನರು ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಬಿಡುಗಡೆಯಾದ ಜಮೀನಿನ ಪೈಕಿ ೩೦ ಎಕರೆ ಪ್ರದೇಶದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದಿಲ್ಲ.

ಇ) ಮೇಲಿನ "ಆ" ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮದಾಸ್ — ಸನ್ಮಾನ್ಯ ಅಧ್ಯಕ್ಷರೇ, ಒಟ್ಟು ಆ ದೇವಪುರ ಕ್ಷೇತ್ರದ ಅಮೃತ ಮಹಲ್ ಕಾವಲ್‌ನಲ್ಲಿ ೮೮೯ ಎಕರೆ ಜಮೀನಿದೆ. ಅದರಲ್ಲಿ ೩೨೧ ಎಕರೆಯನ್ನು ಸಾಗುವಳಿಗೆ ಕೊಟ್ಟಿದ್ದಾರೆ. ೩೦ ಎಕರೆ ಜಮೀನನ್ನು ಬಗರ್‌ಹುಕುಂನಲ್ಲಿ ಹರಿಜನರು ಸಾಗುವಳಿ ಮಾಡುತ್ತಿದ್ದರು. ಏತಕ್ಕೆ ನೀವು ಅವರನ್ನು ಗುರುತಿಸಿಲ್ಲ ? ಮತ್ತು ಸಾಗುವಳಿ ಚೀಟಿಯನ್ನು ಏಕೆ ಕೊಟ್ಟಿಲ್ಲ ?

ಶ್ರೀ ಬಿ. ಆರ್. ಯಾವಗಲ್ (ಕಂದಾಯ ಮಂತ್ರಿಗಳ ಪರವಾಗಿ).— ಒಟ್ಟು ಆ ಕ್ಷೇತ್ರದಲ್ಲಿ ೩೫೯ ಎಕರೆ ೧೮ ಗುಂಟೆ ಜಮೀನನ್ನು ಬೇರೆಬೇರೆ ಜನರಿಗೆ ಬೇರೆಬೇರೆ ರೀತಿಯಲ್ಲಿ ೧೯೫೮ ರಿಂದ ೧೯೮೪ ರವರೆಗೆ ಕೊಟ್ಟಿದ್ದೇವೆ. ಆದರೆ ಇವರು ಹೇಳಿಂದತೆ ಈ ೩೦ ಜನ ಹರಿಜನರು ಬಗರ್‌ಹುಕಂನಲ್ಲಿ ಸಾಗುವಳಿ ಮಾಡುತ್ತಿದ್ದರು, ಈ ಅಂಶ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ಇವರ ಬಗ್ಗೆ ಏನೂ ಕ್ರಮ ವನ್ನು ತೆಗೆದುಕೊಂಡಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಜಿ. ರಾಮದಾಸ್.—ಅವರೆಲ್ಲರೂ ಅವಿದ್ಯಾವಂತ ಜನರು ಇದ್ದಾರೆ. ಮೊದಲು ಸಾಗುವಳಿ ಮಾಡಿದವರು ವಿದ್ಯಾವಂತರು. ಸ್ವಲ್ಪ ಕಾನೂನನ್ನು ಅನುಸರಿಸಿಕೊಂಡು ಸಾಗುವಳಿ ಚೀಟಿಯನ್ನು ತೆಗೆದುಕೊಂಡರು. ಆದರೆ ಈ ಹರಿ ಜನರು ಮುಗ್ಧರು. ಅವರು ಹತ್ತು ವರ್ಷಗಳಿಂದ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ದಯಮಾಡಿ ನಿಮ್ಮ ಕಾನೂನನ್ನು ಸಡಿಲಿಸಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್,— ಮಾನ್ಯ ಅಧ್ಯಕ್ಷರೇ, ಇಂಥ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಕಾಯ್ದೆ ಮಿತಿಯಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಮಾನ್ಯ ಸದಸ್ಯರು.— ಕೊನೆಯ 'ಇ' 'ಪ್ರಶ್ನೆಗೆ' 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದೀರಿ. ಬಹುತೇಕವಾಗಿ ರಾಜ್ಯಾದ್ಯಂತ ಬಡ ಜನರು, ಪರಿಶಿಷ್ಟ ಜನರು ಸಾಗುವಳಿ ಮಾಡುತ್ತಿದ್ದಾರೆ. ಆದ್ದರಿಂದ ಕಾನೂನನ್ನು ಮರು ಪರಿಶೀಲನೆ ಮಾಡಿ ಬಗರ್‌ಹುಕುಂನಲ್ಲಿ ಹರಿಜನರಿಗೆ ಅವಕಾಶ ಮಾಡಿಕೊಡಬೇಕು. ಅಲ್ಲದೆ, ಅವರಿಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಗ ನೀವು ಗೊತ್ತು ಮಾಡಿದ್ದ ಕೊನೆಯ ತಾರೀಖು ಸಾಕಷ್ಟು ಪ್ರಚುರ ಮಾಡಲಿಲ್ಲ. ಸಕಾಲದಲ್ಲಿ ಅರ್ಜಿ ಹಾಕದಿದ್ದವರು ಬಹಳ ಜನ ಇದ್ದಾರೆ, ಆದ್ದರಿಂದ ಮರು ಪರಿಶೀಲನೆ ಮಾಡಿ ಇವರೆಲ್ಲರ ಅರ್ಜಿಯನ್ನು ತೆಗೆದುಕೊಂಡು ಬಗರ್‌ಹುಕುಂ ಸೆಟ್‌ರೈಟ್ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆಯೇ ?

ಶ್ರೀ ಬಿ. ಆರ್. ಯಾವಗಲ್.— ಈ ಬಗ್ಗೆ ಸರ್ಕಾರ ಸಮಗ್ರ ಚಿಂತನೆಯ ನಂತರ ಪರಿಶೀಲನೆ ಮಾಡುತ್ತದೆ.

ರಾಜ್ಯದಲ್ಲಿ ಕಾಫಿ ಬೆಳೆಗಾರರು ಸರಕಾರಿ ಭೂಮಿಯನ್ನು ಒತ್ತುವರಿ ಮಾಡಿದ ಬಗ್ಗೆ

೧೩೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೆ ?.—

ಅ) ರಾಜ್ಯದಲ್ಲಿ ಕಾಫಿ ಬೆಳೆಗಾರರು ಎಷ್ಟು ಎಕರೆ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಹಾಗೂ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮಾಡಿದ್ದಾರೆ ?

ಆ) ಒತ್ತುವರಿ ಭೂಮಿಯನ್ನು ಖಾಯಂಗೊಳಿಸಲಾಗಿದೆಯೆಂ ?

ಇ) ಹಾಗಿದ್ದಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ಬಡರೈತರಿಗೆ ಕೊಡಲು ಸರಕಾರದವರ ಪರಿಶೀಲನೆಯಲ್ಲೇನಾದರೂ ಇದೆಯೆ?